ಮಾಡುವುದಕ್ಕಾಗುವುದಿಲ್ಲ, ನನಗೂ ಡಿನ್ಯೇ ಮಾಡುವುದಕ್ಕಾಗುವುದಿಲ್ಲ. ನಿಮ್ಮ ಅಧಿಕಾರಿಗಳು ಡಿನ್ಯೇ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಯಾರನ್ನು ಅರೆಸ್ಟ್ ಮಾಡಿಲ್ಲ. ಯಾರೋ ಜನರನ್ನು ತರುವುದು, ಅವರಿಗೆ 10-20 ಸಾವಿರ ಹಣವನ್ನು ಕೊಡುವುದು ಮತ್ತೆ ಒಪ್ಪಿಸುವುದು ಮನೆಗೆ ಕಳುಹಿಸುವುದು. 2 ವರ್ಷ 3 ವರ್ಷ ಜೈಲಿಗೆ ಕಳುಹಿಸುವುದು, ಹಾಗಾಗಿ ಇದರ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಆಂದರೆ ಸತ್ಯ ಹೊರಗೆ ಬರುತ್ತದೆ. ಯಾರು ಜವಾಬ್ದಾರರಿರುತ್ತಾರೆ ಅವರ ವರ್ತನೆಯ ಬಗ್ಗೆ ಒಂದು ಭಯದ ವಾತಾವರಣ ನಿರ್ಮಾಣವಾಗುತ್ತದೆ. ಇಲ್ಲವೆಂದರೆ ನಿಮ್ಮ ಕಾನೂನು ವ್ಯವಸ್ಥೆಯ ಬಗ್ಗೆ ಯಾರಿಗೂ ಭಯವಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ ಸಮಗ್ರ ತನಿಖೆಯ ಬಗ್ಗೆ ಕೇಳುತ್ತಿದ್ದೀರಿ. ಬರಿ 20-2-93ರ ಇದರ ಬಗ್ಗೆ ಸೀಮಿತವಾಗಿದ್ದರೆ ನಾನು ಉತ್ತರ ಕೊಡಬಹುದು. ಆದರೆ ಸಮಗ್ರ ತನಿಖೆಯಾಗಬೇಕೆಂದು ತಾವು ಕೇಳಿಕೊಂಡಿದ್ದೀರಿ ಅದಕ್ಕೆ 12 ಗಂಟೆಗೆ ನಾನು ತಮಗೆ ಉತ್ತರ ಕೊಡುತ್ತೇನೆ.

(4) ನಾಗಮಂಗಲ ತಾಲ್ಲೂಕಿನ ಬೊನಾಳೆ ಕಾಲುವೆಗೆ ಸ್ವಾಧೀನಪಡಿಸಿಕೊಂಡ ರೈತರ ಭೂಮಿಗೆ ಪರಿಹಾರ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:-ಸನ್ಮಾನ್ಯ ಅಧ್ಯಕ್ಷರೇ, ಮದ್ದೂರ್ ಮತ್ತು ನಾಗಮಂಗಲ ತಾಲ್ಲೂಕಿನಲ್ಲಿ ತೋಡಲಾದಂಥ ಬೊನಾಳೆ ಕಾಲುವೆ ಎಡದಂಡೆ ಮತ್ತು ಬಲದಂಡೆ ಕಾಲುವೆಗೆ ಸ್ವಾಧೀನಪಡಿಸಿಕೊಂಡಂಥ 8 ಗ್ರಾಮಗಳ ರೈತರ ಭೂಮಿಗೆ 18 ವರ್ಷದಿಂದ ಪರಿಹಾರ ಕೊಟ್ಟಿಲ್ಲ. ರೈತರು ಪರಿಹಾರಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿದರೂ, ಸಿಕ್ಕಿಲ್ಲ. ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಅಹವಾಲು ಕೊಟ್ಟಿದ್ದಾರೆ, ತೀವ್ರಗತಿಯಿಂದ ನಾವು ಪರಿಶೀಲನೆ ಮಾಡುತ್ತೇವೆ ಎನ್ನತಕ್ಕಂಥ ಉತ್ತರವನ್ನು ಸಹ ಕೊಟ್ಟಿದ್ದಾರೆ. ಮತ್ತೆ ಒಂದು ವರ್ಷ ಕಳೆಯಿತು ಇನ್ನುತನಕ ಪರಿಹಾರ ಸಿಕ್ಕಿಲ್ಲ. ಆ ಕಾರಣ ತೀವ್ರ ಪರಿಹಾರವನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ವರದಿಯನ್ನು ತರಿಸಿ ನಾವು ಪರಿಶೀಲನೆ ಮಾಡುತ್ತೇವೆ.

(5) ಸಾಗರ ತಾಲ್ಲೂಕು ಕುರುವಳ್ಳಿ ಗ್ರಾಮದ ಶ್ರೀಮತಿ ಪ್ರೇಮ ಎನ್ನುವವರ ಕೊಲೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಮ್ಮ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ನೋವಿನ ಸಂಗತಿ ಎಂದರೆ ಶ್ರೀಮತಿ ಪ್ರೇಮ, ಕುರುವಳ್ಳಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಇಲ್ಲಿ ಇವಳನ್ನು ಅಮಾನುಷವಾಗಿ ಕೊಲೆ ಮಾಡಿರುವ ಒಂದು ಪ್ರಸಂಗ ಬೆಳಕಿಗೆ ಬಂದಿದೆ. ನಾವು ಅಲ್ಪಸ್ವಲ್ಪ ಇಲ್ಲಿ ಕುಳಿತಿರುವ ಮಹಿಳಾ ಶಾಸಕರು ಹೆಣ್ಣುಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನು ಬೆಳಕಿಗೆ ತರುತ್ತಿದ್ದೇವೆನ್ನುವ ವಿಶ್ವಾಸದಿಂದ ನಮಗೆ ಈಗ ಇಂಥ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿ ನಾವು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಾಗುತ್ತಿದೆ. ಈ ಪ್ರೇಮಳ ಕೊಲೆಗೆ ಕಾರಣರು ಯಾರು? ಯಾವ ಕಾರಣಕ್ಕಾಗಿ ಈ ಹೆಣ್ಣು ಮಗಳನ್ನು ಕೊಲೆ ಮಾಡಿದರು ಇದರ ಬಗ್ಗೆ ಇನ್ನೂ ತನಿಖೆ ಏತಕ್ಕೆ ಆಗಲಿಲ್ಲ ಮತ್ತು ಸಂಬಂಧಪಟ್ಟವರಿಗೆ ಏತಕ್ಕೆ ಶಿಕ್ಷೆಯಾಗಲಿಲ್ಲವೆನ್ನುವುದನ್ನು ನಾನು ಪ್ರಶ್ನೆ ಮಾಡುತ್ತಾ ಕೂಡಲೇ ಶಿವಮೊಗ್ಗ ಡಿಸ್ಟ್ರಿಕ್ಟ್ ತುರುವಳ್ಳಿ, ಸಾಗರ ತಾಲ್ಲೂಕು, ಅಲ್ಲಿ ಕೂಡಲೇ ಎಂಥ ವ್ಯಕ್ತಿಯಾಗಿದ್ದರೂ ಎಂಥ ಪ್ರಭಾವಿಯುತ ವ್ಯಕ್ತಿಯಾಗಿದ್ದರೂ ಅವರನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು.

ಪುನಃ ಎಲ್ಲಿಯೂ ಸಮಾಜದಲ್ಲಿ ಮಹಿಳೆಯರ ಸಾವಾಗಲಿ, ಅತ್ಯಾಚಾರ ಪ್ರಕರಣವಾಗಲಿ ಮರುಕಳಿಸಬಾರದು. ಮೊನ್ನೆ ದಿವಸ ಹೆಣ್ಣು ಮಕ್ಕಳ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ; ಹಾನಗಲ್‌ನಲ್ಲಿ

ಅಂಗನವಾಡಿ ಶಿಕ್ಷಕಿಯನ್ನು ಬೆತ್ತಲೆ ಮಾಡಿ ಸಿಕ್ಕಾಬಟ್ಟೆ ಹೊಡೆದು ಅವಮಾನ ಮಾಡಿದ್ದಾರೆ ಎಂದು. ನಿನ್ನೆ ಹೇಳಿಕೆ ನೋಡಿದಾಗ ಗೊತ್ತಾಯಿತು ಇನ್ನೂ ಕೇಸನ್ನು ರಿಜಿಸ್ಟರ್ ಮಾಡಿರಲಿಲ್ಲ ಎಂದು. ನಾವು ಪ್ರಸ್ತಾಪ ಮಾಡದಿದ್ದರೆ ಕೇಸನ್ನು ರಿಜಿಸ್ಟರ್ ಮಾಡುತ್ತಿರಲಿಲ್ಲ, ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಇದು ಬಹಳ ವಿಷಾದದ ಸಂಗತಿ. ಆದುದರಿಂದ ಸರ್ಕಾರದಲ್ಲಿ ಹೆಣ್ಣು ಮಕ್ಕಳಿಗೆ ರಕ್ಷಣೆ ಮತ್ತು ನ್ಯಾಯ ಇದೆಯೇ ಎಂದು ಕೇಳುತ್ತಾ ಇದು ಅವರಿಗೆ ಸಿಗುವಂತಾಗಬೇಕೆಂಬ ಪ್ರಸ್ತಾಪವನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ದಮಯಂತಿ ಜೋರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರೇಮಾಳ ಸಾವಿನ ಪ್ರಕರಣ ಓದಿ ಬಹಳ ದುಃಖವಾಯಿತು. ನಿರಂತರವಾಗಿ ಮಹಿಳೆಯರ, ಅದರಲ್ಲೂ ಹರಿಜನ ಮಹಿಳೆಯರ ಬಗ್ಗೆ ಬಹಳ ಉದಾಸೀನ ಮಾಡುತ್ತಿದ್ದಾರೆ. ಸರ್ಕಾರದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕಾದರೂ ಪೇಪರ್‌ನಲ್ಲಿ ಬಂದು ಒಂದು ತಿಂಗಳಾದರೂ ಕ್ರಮ ತೆಗೆದುಕೊಳ್ಳುವುದಿಲ್ಲ. ಇಂಥ ಸಮಾಜಘಾತುಕ ವ್ಯಕ್ತಿಗಳನ್ನು ಕೇಸ್ ಹಾಕುವುದಲ್ಲ, ಶಿಕ್ಷೆಗೆ ಒಳಪಡಿಸಿ ಪಬ್ಲಿಕ್ ಪ್ಲೇಸ್‌ನಲ್ಲಿ ಹ್ಯಾಂಗ್ ಮಾಡಿದರೆ ಸ್ವಲ್ಪ ಭಯಭೀತಿ ಬರುತ್ತದೆ ಮತ್ತು ಕಾನೂನು ಬಗ್ಗೆ ಗೌರವ ಬರುತ್ತದೆ. ಪ್ರೇಮ, ಚಿಕ್ಕ ವಯಸ್ಸಿನ ಹುಡುಗಿ. ಆಕೆಯನ್ನು ತೀರ್ಥಹಳ್ಳಿ ತಾಲ್ಲೂಕಿನ ಕುರುವಳ್ಳಿ ಎಂಬಲ್ಲಿ ಜಾತ್ರೆಗೆ ಕರೆದುಕೊಂಡು ಹೋಗಿ ಕೊಲೆ ಮಾಡಿದ್ದಾರೆ. ಹೆಣ್ಣುಮಕ್ಕಳ ಜೀವ ಎಂದರೆ ಹುಳುಗಳಿಗಿಂತ ಕಡಿಮೆಯಾಗಿದೆ. ಪೋಲೀಸರು ಇರುವುದು ಏತಕ್ಕೆ ಎಂದು ಅರ್ಥವಾಗುತ್ತಿಲ್ಲ. ಇಷ್ಟೆಲ್ಲ ಹಗರಣವಾದರೂ ನಿಧಾನವಾಗಿ ಹೋಗುತ್ತಾರೆ ವಿಚಾರಣೆ ಮಾಡುವುದಕ್ಕೆ. ಅಷ್ಟರಲ್ಲಿ ಆರೋಪಿಗೆ ಸಮಯ ಸಿಕ್ಕಿರುತ್ತದೆ. ಆತ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಸಹಜ. ಆದುದರಿಂದ ಇಂಥ ಪ್ರಕರಣಗಳು ಆಗದಂತೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾವು ಪ್ರಾರ್ಥನೆ ಮಾಡುತ್ತಿದ್ದೇವೆ.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಡುತ್ತಾರೆಂದು ಹೇಳಬಯಸುತ್ತೇನೆ. ನಮಗೆ ಅಸೆಂಬ್ಲಿ ನಡೆಯುವಾಗ ಇಂಥ ಪ್ರಕರಣಗಳು ಗಮನಕ್ಕೆ ಬಂದು ನಾವು ಇಲ್ಲಿ ಪ್ರಸ್ತಾಪಿಸುತ್ತೇವೆ. ಅಸೆಂಬ್ಲಿ ನಡೆಯದೆ ಇದ್ದಾಗ ಅವು ಮುಚ್ಚಿಹೋಗುತ್ತವೆಂದು ಭಾವನೆ. ಈ ಬಗ್ಗೆ ಸರಿಯಾದ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಕುರುವಳ್ಳಿಯಲ್ಲಿ ಏನು ನಡೆದಿದೆ ಅದರ ಜೊತೆಗೆ ಇನ್ನೊಬ್ಬ ಸುಬ್ಬಮ್ಮ ಎಂಬ ಗರ್ಭಿಣಿ ಸ್ತ್ರೀಯನ್ನು ಮರ್ಡರ್ ಮಾಡಿದ್ದಾರೆ. ಅದರ ಬಗ್ಗೆ ಮಾಹಿತಿ ಇಲ್ಲ, ತಪ್ಪಿತಸ್ಥರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಅದರ ಬಗ್ಗೆ ಸರಿಯಾದ ಉತ್ತರವನ್ನು ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಕುರುವಳ್ಳಿ ಪ್ರಕರಣದ ಬಗ್ಗೆ ಪತ್ರಿಕೆಯಲ್ಲಿ ಇದೆ. ಪತ್ರಿಕೆಯಲ್ಲಿ ಬಂದ ಮೇಲೆ, ಇಲ್ಲಿ ಪ್ರಸ್ತಾಪ ಮಾಡಿದ ಮೇಲೆ ತನಿಖೆ ಮಾಡುತ್ತಾರೆಂದು ಹೇಳುವುದು ಸರಿಯಲ್ಲ. ಪತ್ರಿಕೆಯಲ್ಲಿ ಸಿದ್ದಾಪುರದ ಪೋಲೀಸರು ತನಿಖೆ ನಡೆಸಿದ್ದಾರೆಂದು ಇದೆ. ಪತ್ರಿಕೆಯಲ್ಲಿ ಬಂದ ಮೇಲೆ ತನಿಖೆ ಮಾಡುತ್ತಾರೆ,ಅದಕ್ಕೆ ಮೊದಲು ಇನ್‌ವೆಸ್ಟಿಗೇಷನ್ ಮಾಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ತನಿಖೆಗೆ ತಾವು ಸರಿಯಾಗಿ ಮಾಹಿತಿ ಕೊಟ್ಟಿಲ್ಲ. ಪತ್ರಿಕೆಯಲ್ಲಿ ಬಂದಿದೆ ಎಂದು ರೇಸ್ ಮಾಡಿದ್ದೀರಿ. ಇದರ ಬಗ್ಗೆ ಸರಿಯಾಗಿ ತನಿಖೆ ಮಾಡುತ್ತೇವೆ; ಯಾವ ಚಿಂತೆಯೂ ಬೇಕಾಗಿಲ್ಲ. ಈಗ ಪ್ರಸ್ತಾಪ ಮಾಡಿದ್ದೀರಿ, ವರದಿ ತರಿಸುತ್ತೇವೆ. ತಾವು ಪ್ರಸ್ತಾಪ ಮಾಡಿದ ಕೂಡಲೇ ತನಿಖೆ ಆಗಲಿಲ್ಲವೆಂಬ ಭಾವನೆ ಸಾರ್ವಜನಿಕರಿಗೆ ಮತ್ತು ಸದಸ್ಯರಿಗೆ ಇರಬೇಕಾದ ಅವಶ್ಯಕತೆ ಇಲ್ಲ. ತನಿಖೆ ಇದೆ, ಅದನ್ನು ಪರಿಶೀಲಿಸುತ್ತೇವೆ. ಏನಾದರೂ ಲ್ಯಾಪ್ಸ್ಸ್ ಇದ್ದರೆ ಖಂಡಿತ ತನಿಖೆಯನ್ನು ಬಲಗೊಳಿಸುತ್ತೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್:- ತನಿಖೆ ಬಗ್ಗೆ ಆಶ್ವಾಸನೆ ಕೊಡುತ್ತಿದ್ದೀರಿ. ಆದರೆ ಕುಷ್ಮಗಿ ಪ್ರಕರಣದಲ್ಲಿ ತನಿಖೆಯ ಫಲಿತಾಂಶ ಏನಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ:- ಕುಷ್ಮಗಿ ಪ್ರಕರಣದ ಬಗ್ಗೆ ಆಗಲೇ ಸಿ.ಓ.ಡಿ. ತನಿಖೆ ಕೊನೇ ಹಂತದಲ್ಲಿದೆ. ಜೊತೆಗೆ ಸದನದ ಸಮಿತಿ ಹೋದುದರಿಂದ ಸದನದ ಸಮಿತಿ ವರದಿ ಕೊಡದೆ ಸಿ.ಓ.ಡಿ.ಯವರು ವರದಿ

ಕೊಡುವುದಕ್ಕಾಗುವುದಿಲ್ಲ. ಸದನದ ಸಮಿತಿ ಹೋಗಿ ವರದಿ ಕೊಡಲಿಕ್ಕೆ ನಾವು ಎಲ್ಲ ಕ್ರಮ ತೆಗೆದುಕೊಂಡಿದ್ದೇವೆ. ನಾನು ಕೂಡ ಹೋಗಿದ್ದೆ. ಸಿ.ಓ.ಡಿ. ತನಿಖೆ ಮಾಡಿದ್ದೇವೆ. ಆದರಲ್ಲಿ ಯಾವುದನ್ನೂ ಬಿಟ್ಟಿಲ್ಲ. ತಾವೂ ಕೂಡ ಸ್ವಲ್ಪ ವಿಚಾರ ತಿಳಿದುಕೊಳ್ಳುವುದು ಒಳ್ಳೆಯದು.

ಶ್ರೀಮತಿ ರೇಣುಕಾ ರಾಜೇಂದ್ರನ್:- ನಮ್ಮ ರಾಜ್ಯದಲ್ಲಿ ಮಹಿಳಾ ಪೋಲೀಸ್ ಎಸ್.ಪಿ.ಗಳು ಎಷ್ಟು ಇದ್ದಾರೆ? ಇಂತಹವರು ರಾಜ್ಯದಲ್ಲಿ ಎಲ್ಲೇ ಕೆಲಸ ಮಾಡುತ್ತಿರಲಿ ಅವರನ್ನು ಕರೆದು ವಿಶೇಷವಾದ ಪ್ರಕರಣಗಳಲ್ಲಿ ತನಿಖೆಗೆ ನೇಮಿಸಿದರೆ ಹೆಣ್ಣು ಮಕ್ಕಳಿಗೆ ನ್ಯಾಯ ದೊರಕುತ್ತದೆನ್ನುವ ನಂಬಿಕೆಯಿಂದ ಈ ಸಲಹೆ ನಾನು ಕೊಡುತ್ತಿದ್ದೇನೆ. ಎಷ್ಟು ಜನ ಐಪಿಎಸ್ ಲೇಡಿ ಅಧಿಕಾರಿಗಳು ಇದ್ದಾರೆ ಅವರು ಎಲ್ಲೇ ಇರಲಿ ಅವರಿಗೆ ಕರೆ ಕಳುಹಿಸಿ ಇಂತಹ ವಿಚಾರಗಳ ಬಗ್ಗೆ ತನಿಖೆ ಮಾಡುವುದಕ್ಕೆ ಸಾಧ್ಯ ಇದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಇಂತಹ ಸಲಹೆಗಳನ್ನು ಸರ್ಕಾರ ಪರಿಗಣನೆ ಮಾಡುತ್ತದೆ.

ಶ್ರೀಮತಿ ಮೋಟಮ್ಮ :- ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, ತನಿಖೆ ನಡೆಯುತ್ತಿದೆ, ಆದರೆ ತನಿಖೆ ಸರಿಯಾಗಿ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ ನಾವೂ ಕೂಡ ಪ್ರಸ್ತಾಪ ಮಾಡಿಲ್ಲ ಎಂದು ಹೇಳಿದರು. ಇವತ್ತು ಆಕೆಯ ಅಣ್ಣನೇ ನನಗೆ ಪತ್ರವನ್ನು ಬರೆದಿದ್ದಾನೆ. ಆ ವಿಚಾರದಲ್ಲಿ ಸರಿಯಾಗಿ ತನಿಖೆ ಆಗುತ್ತಿಲ್ಲ ಎಂದು ಪತ್ರ ಬರೆಯುವುದರ ಜೊತೆಗೆ ಆತನ ಮತ್ತು ಆತನ ಕುಟುಂಬವರ್ಗದವರಿಗೂ ಕೂಡ ಬೆದರಿಕೆ ಒಡ್ಡುತ್ತಿದ್ದಾರೆಂದು ಹೇಳಿದ್ದಾನೆ. ಇನ್ನು ಹಾನಗಲ್ ವಿಚಾರ ಹೇಳಬೇಕೆಂದರೆ ಅಲ್ಲಿನ ಅಂಗನವಾಡಿ ಕಾರ್ಯಕರ್ತೆ ಕಮಲವ್ವನ ಬಗ್ಗೆ ಕೇಸೇ ರಿಜಿಸ್ಟರ್ ಆಗಿಲ್ಲ. ಕೇಸ್ ರಿಜಿಸ್ಟರ್ ಮಾಡಿದ್ದೇವೆ ಎನ್ನುವ ಉತ್ತರ ಬಂತು. ನಾವು ನಿನ್ನೆ ಇರಲಿಲ್ಲ. ಶ್ರೀಮತಿ ಮಲ್ಲಾಜಮ್ಮ ಅವರು ಇದ್ದರು. ಅವರು ತಿಳಿಸಿದರು. ಹೀಗೆ ಆಗಬಾರದು. ಹೆಣ್ಣುಮಕ್ಕಳ ಬಗ್ಗೆ ಯಾವುದೇ ಅತ್ಯಾಚಾರ ಇರಬಹುದು, ಕೊಲೆ ಇರಬಹುದು, ಯಾವುದೇ ದೌರ್ಜನ್ಯ ಇದ್ದರೂ ಸರಿಯಾದ ಹೇಳಿಕೆ ಬರಬೇಕು. ಸಂಬಂಧಪಟ್ಟವರಿಗೆ ಶಿಕ್ಷೆ ಆಗಬೇಕು. ಇಂತಹ ಕೇಸ್‌ಗಳನ್ನು ಪೋಲೀಸರಿಗೆ ತನಿಖೆಗೆ ಕೊಡುವ ಬದಲು ಎಲ್ಲವನ್ನೂ ಸಿ.ಓ.ಡಿ. ಅವರಿಗೆ ಎಂಟ್ರುಸ್ಟ್ ಏಕೆ ಮಾಡಬಾರದು? ವರದಕ್ಷಿಣೆ ಕೇಸ್‌ಗಳು ಬರುತ್ತವೆ. ಯಲಹಂಕದ ಹತ್ತಿರ ಕೆಲಸಕ್ಕೆ ಹೋಗಿ ಬರುತ್ತಿದ್ದ ಒಬ್ಬ ಹೆಣ್ಣುಮಗಳನ್ನು ಬಲವಂತವಾಗಿ ಗದ್ದೆಗೆ ಎಳೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದರ ಬಗ್ಗೆ ಕಂಪ್ಲೇಂಟ್ ಮಾಡಿದ್ದಾರೆಂದು ಓದಿದ್ದೇನೆ. ಇಂತಹ ಪ್ರಕರಣಗಳು ಜಾಸ್ತಿ ಆಗುತ್ತಿರುವಾಗ ಇಂತಹವನ್ನು ಪೋಲೀಸರ ಕೈಗೆ ಕೊಡಬೇಡಿ. ಅವರಿಂದ ನ್ಯಾಯ ಒದಗಿಸುತ್ತೇವೆಂದು ಹೇಗೆ ಹೇಳುತ್ತೀರಿ? ಇಂತಹವನ್ನು ವಿಶೇಷವಾಗಿ ಸಿ.ಓ.ಡಿ. ಮತ್ತು ಸಿ.ಬಿ.ಐ.ನಿಂದ ಎನ್‌ಕ್ವೈರಿ ಮಾಡಿಸಬೇಕು ಅಥವಾ ಮಹಿಳಾ ಪೋಲೀಸ್ ಅಧಿಕಾರಿಗಳನ್ನು ಇಂತಹವಕ್ಕೆ ಎಂಟ್ರುಸ್ಟ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ವರದಕ್ಷಿಣೆ ಪ್ರಕರಣಗಳನ್ನೆಲ್ಲಾ ಸಿ.ಓ.ಡಿ. ತನಿಖೆ ಮಾಡುತ್ತಿದೆ. ಮತ್ತೆ ಇಂತಹ ಕ್ರೈಮ್ ಕೇಸಸ್ ಎಲ್ಲೆಲ್ಲಿ ಸಿ.ಓ.ಡಿಗೆ ಒಪ್ಪಿಸಬೇಕೆಂದು ಅಭಿಪ್ರಾಯ ಬರುತ್ತದೆಯೇ ಅಂತಹವನ್ನು ಸಿ.ಓ.ಡಿಗೆ ಒಪ್ಪಿಸಬಹುದು.

ಶ್ರೀಮತಿ ಮಲ್ಲಾಜಮ್ಮ :- ಹಾನಗಲ್ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಾ ಮಾನ್ಯ ಸಮಾಜಕಲ್ಯಾಣ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ತನಿಖೆಗೆ ಕಳುಹಿಸಿದ್ದೇವೆ ಎಂದು ಹೇಳಿದರು. ತನಿಖೆ ಏನಾಯಿತು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಧರ್ಮಸಿಂಗ್:- ಮೊನ್ನೆ ಮಲ್ಲಾಜಮ್ಮನವರು ಮತ್ತು ರೇಣುಕಾರಾಜೇಂದ್ರನ್ ಅವರು ಹೇಳಿದ ಹಾಗೆ ಡೈರಕ್ಟರ್ ಆಫ್ ಉಮೆನ್ ವೆಲ್‌ಫೇರ್ ಅವರಿಗೆ ಹೇಳಿದ್ದೇನೆ. ಅವರೂ ಕೂಡಾ ಆಫೀಸರ್ಸ್ ಕಳುಹಿಸಿದ್ದಾರೆ. ಈ ಮಧ್ಯೆ ಪೋಲೀಸ್ ಅಧಿಕಾರಿಗಳ ಜೊತೆ ಮಾತನಾಡಿ ತನಿಖೆ ಮಾಡಿಸುತ್ತೇನೆ.

ಶ್ರೀಮತಿ ಮಲ್ಲಾಜಮ್ಮ :-ಸಮಾಜ ಕಲ್ಯಾಣ ಸಚಿವರು ಅಲ್ಲಿಗೆ ಹೋಗಿದ್ದರೇ?

ಶ್ರೀ ಧರ್ಮಸಿಂಗ್ :- ಇದ್ದು ಹೋಗಿಲ್ಲ; ಪೋಲೀಸ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ.

ಶ್ರೀಮತಿ ಮೋಟಮ್ಮ :- ಅಂಗನವಾಡಿ ಕಾರ್ಯಕರ್ತೆಯರಿಗೆ ರಕ್ಷಣೆ ಕೊಡುವುದು ಸಾಮಾಜಿಕ ನ್ಯಾಯ ದೊರಕಿಸುವುದು ನಿಮಗೆ ಬರುತ್ತದೆ. ಇವತ್ತು ಅವರಿಗೆ ಆದ ನೋವು ನಮಗೆ ಆದ ನೋವು ಅಲ್ಲವೇ? ತಾವು ಇದ್ದು ಹೋಗಬೇಕು.

ಶ್ರೀ ಧರ್ಮಸಿಂಗ್ :-ಹೋಗಿ ಬರುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ:-ಕರಾವಳಿ ಪ್ರದೇಶದಲ್ಲಿ ಸೀಗಡಿ ಮಿಾನು ಕೃಷಿಗೆ ಭೂ ಸ್ವಾಧೀನ

ಶ್ರೀ ಜಿ.ಎಸ್. ಆಚಾರ್ :- ಮಾನ್ಯ ಅಧ್ಯಕ್ಷರೇ, ಕರಾವಳಿ ಪ್ರದೇಶದಲ್ಲಿ ಸಿಗಡಿ ಕೃಷಿಗೆ ಸ್ವಾಧೀನಪಡಿಸಿಕೊಂಡ ಭೂಮಿಯ ಬಗ್ಗೆ ಮಾನ್ಯ ಮಿಾನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ :- (ಮಿಾನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಹೇಳಿಕೆ ನೀಡಬಯಸುತ್ತೇನೆ.

ಕರ್ನಾಟಕ ರಾಜ್ಯದ ಎರಡು ಕರಾವಳಿ ಜಿಲ್ಲೆಗಳ ಪ್ರದೇಶದಲ್ಲಿ 8 ಸಾವಿರ ಹೆಕ್ಟೇರ್ ಉಪ್ಪು ನೀರು ಪ್ರದೇಶವಿದ್ದು, ಇದರಲ್ಲಿ 4 ಸಾವಿರ ಹೆಕ್ಟೇರ್ ಸೀಗಡಿ ಕೃಷಿಗೆ ಯೋಗ್ಯವೆಂದು ಅಂದಾಜು ಮಾಡಲಾಗಿದೆ. ಈ 4 ಸಾವಿರ ಹೆಕ್ಟೇರ್ ಉಪ್ಪು ನೀರು ಜಾಗದಲ್ಲಿ ಸರ್ಕಾರದ ಸ್ವಾಧೀನದಲ್ಲಿರುವ ಸ್ಥಳ ಕೇವಲ 300 ಹೆಕ್ಟೇರ್ ಜಮಿನು. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಹಣಕಾಸಿನ ನೆರವಿನಿಂದ ಉಪ್ಪು ನೀರು ಮಿನು ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿದೆ. ಈ ಸಂಸ್ಥೆಯ ಕಾರ್ಯವ್ಯಾಪ್ತಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಉಪ್ಪು ನೀರು ಮಿನು ಕೃಷಿ ಜಮಿನು ವಿತರಣೆ ಬಗ್ಗೆ ಕೆಲವು ಸಲಹೆಗಳನ್ನು ಇತ್ತಿತ್ತು. ಈ ಸಲಹೆಯ ಮೇರೆಗೆ ಸರ್ಕಾರದ ಅಧೀನದಲ್ಲಿರುವ ಉಪ್ಪು ನೀರು ಜಮಿನಿನಲ್ಲಿ ಶೇಕಡಾ 50 ಭಾಗ ಮಿನುಗಾರರ ಸಹಕಾರ ಸಂಘಗಳಿಗೆ, ವೈಯಕ್ತಿಕ ಮಿನುಗಾರರಿಗೆ ಮತ್ತು ಇದರಲ್ಲಿ 18 ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ 1 ಹೆಕ್ಟೇರ್ ಜಾಗವನ್ನು ಕೊಡಲು ಮತ್ತು ಶೇಕಡಾ 30 ರಷ್ಟು ಉಪ್ಪು ನೀರು ಪ್ರದೇಶವನ್ನು ಸಣ್ಣ ಕೈಗಾರಿಕೆ ಉದ್ಯಮಿಗಳಿಗಾಗಿ ಮತ್ತು ತಾಂತ್ರಿಕ ಅನುಭವವಿರುವ ಸ್ವಯಂ ಉದ್ದಿಮೆಗಳಿಗೆ 1 ರಿಂದ 4 ಹೆಕ್ಟೇರ್ ಪ್ರದೇಶವನ್ನು ಉಳಿದ ಶೇಕಡಾ 20 ಜಮಿನನ್ನು 4 ಹೆಕ್ಟೇರ್‌ನಿಂದ 10 ಹೆಕ್ಟೇರ್‌ನವರೆಗೆ ದೊಡ್ಡ ಸಂಸ್ಥೆಯವರಿಗೆ ಕೊಡಲು ಸರ್ಕಾರ ಆಜ್ಞೆ ಹೊರಡಿಸಿದೆ. ಉಪ್ಪುನೀರು ಜಮಿನು ವಿತರಣೆ ಮಾಡಲು ಸರ್ಕಾರ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯನ್ನು ರಚಿಸಿ, ಈ ಸಮಿತಿಯು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಜ್ಞೆ ಹೊರಡಿಸಿದೆ. ಅದರಂತೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾಧಿಕಾರಿಯವರು ಜಾಹೀರಾತನ್ನು ನೀಡಿ, ಅಭ್ಯರ್ಥಿಗಳ ಅರ್ಜಿಯನ್ನು ಸ್ವೀಕರಿಸಿ, ಅವರು ಮಾಡಿದ ಶಿಫಾರಸ್ಸಿನಂತೆ ಒಟ್ಟು 175 ಹೆಕ್ಟೇರ್ ಉಪ್ಪು ನೀರು ಜಮಿನನ್ನು ಇದುವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 145 ಹೆಕ್ಟೇರ್‌ಗಳನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 30 ಹೆಕ್ಟೇರ್ ಉಪ್ಪು ನೀರು ಕೃಷಿ ಭೂಮಿಯನ್ನು ಖಾಸಗಿ ಉದ್ದಿಮೆದಾರರಿಗೆ, ಸ್ವಉದ್ಯೋಗಿಗಳಿಗೆ, ಮಿನುಗಾರಿಕೆ ಕಾಲೇಜಿಗೆ, ಮಿನುಗಾರಿಕೆ ಸಹಕಾರ ಸಂಘಗಳ ಸದಸ್ಯರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಮತ್ತು ಖಾಸಗಿ ಅಭ್ಯರ್ಥಿಗಳಿಗೆ ಗುತ್ತಿಗೆ ನೀಡಲು ಸರ್ಕಾರವು ಆದೇಶವಿತ್ತಿದೆ. ಸರ್ಕಾರದ ಆದೇಶ ಸಂಖ್ಯೆ ಎಹೆಚ್‌ಎಫ್‌ಎಫ್315